2-45 P.M.

ಶ್ರೀ ಪಿ. ಎಂ. ನಾಡಗೌಡ.—ಅವಕಾಶ ಸಿಕ್ಕಿದರೆ ಈ ಅಧಿವೇಶನದಲ್ಲೇ ಈ ಸಂಬಂಧವಾದ ಬಿಲ್ಲನ್ನು ಪರಿಶೀಲನೆಗಾಗುವುದು. ಮಾನ್ಯ ವಿರೋಧ ಪಕ್ಷದ ಸದಸ್ಯರು ಸಹಕರಿಸಿದರೆ ಈ ಬಿಲ್ಲನ್ನು ಶೀಘ್ರದಲ್ಲೇ ತರಲಾಗುವುದು.

ಶ್ರೀ ಜಿ. ವಿ. ಆಂಜನಪ್ಪ.—ವಿರೋಧ ಪಕ್ಷದ ಸದಸ್ಯರಿಂದ ಈ ಕೆಲಸಕ್ಕೆ ಅಡ್ಡಿಯಾಗಿದೆ ಎಂಬುದು ಸರಕಾರ ಭಾವನೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇದುವರೆಗೆ ಕೆಲವು ಅಡಚಣೆಗಳಿಂದ ತಡವಾಯ್ತು. ಒಂದು ವರ್ಷದಿಂದ ಜಾಗ್ರತೆ ತರಬೇಕೆಂದು ಸರಕಾರ ಪ್ರಯತ್ನಪಟ್ಟರೂ ಕೆಳಮನೆಯಲ್ಲಿ ಗಂಡಾಂತರವಾಗಿ ಕನ್‌ಫ್ಯೂಷನ್ ಆಗಿ ತರಲು ಇದುವರೆಗೆ ಅವಕಾಶವಾಗಲಿಲ್ಲ.

ಶ್ರೀ ಸಿ. ಎನ್. ಬಾಲಕೃಷ್ಣಗೌಡ.—ಮಾನ್ಯ ಮಂತ್ರಿಗಳು ವಿರೋಧ ಪಕ್ಷದ ಬಗ್ಗೆ ಆಪಾದಿಸಿದ್ದು ಸತ್ಯಕ್ಕೆ ದೂರವಾದುದು ಎಂದು ವಿಷಾದದಿಂದ ಹೇಳಬೇಕಾಗಿದೆ. ಅಡ್ಡಿ ಆತಂಕ ಕಾನೂನು ಬದ್ಧವಾಗಿ ಮಾಡಲು ಅವಕಾಶವಿದೆ. ರಾಜ್ಯಪಾಲರ ಭಾಷಣದಲ್ಲಿ ಈ ಅಧಿವೇಶನದಲ್ಲಿ ತಗೆದುಕೊಳ್ಳುವುದಾಗಿ ಹೇಳಿರುವ ಬಿಲ್ಲುಗಳ ಪಟ್ಟಿಯಲ್ಲಿ ಮಾನ್ಯ ಮಂತ್ರಿಗಳು ಹೇಳುವ ಬಿಲ್ಲು ಸೇರಿಲ್ಲ. ಇದು ಮುಖ್ಯವಾದುದಾದ್ದರಿಂದ ಇದನ್ನು ಸ್ಪಷ್ಟವಾಗಿ ನಮೂದಿಸಬೇಕಾಗಿತ್ತು. ಇದಕ್ಕೆ ಪ್ರಾಶಸ್ತ್ಯ ಕೊಡಬೇಕಾಗಿತ್ತು. ಆದರೆ ಕೆಲವು ಸಣ್ಣಪುಟ್ಟ ಕಾನೂನುಗಳು ಮಾತ್ರ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿವೆ. ಇದನ್ನು ನೋಡಿದರೆ ನಿಜವಾಗಿಯೂ ಕೂಡ ಈ ಕಾನೂನನ್ನು ಈ ಅಧಿವೇಶನದಲ್ಲಿ ತರಲು ಸರಕಾರಕ್ಕೆ ಮನಸ್ಸಿದೆಯೇ ಎಂಬ ಅನುಮಾನ ಬರುತ್ತದೆ.

ಶ್ರೀ ಪಿ. ಎಂ. ನಾಡಗೌಡ —ಮಾನ್ಯ ಸದಸ್ಯರು ಸಹಕಾರಮಾಡಿದರೆ ಸರಕಾರ ಈ ಸಂಬಂಧವಾದ ಕಾನೂನನ್ನು ಈ ಅಧಿವೇಶನದಲ್ಲೇ ತರಲು ತಯಾರಾಗಿದ್ದಾರೆ. ಹೋದ ವರ್ಷವೇ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿ ರ್ಯಾಪ್ತಾಗಿದೆ.

ಶ್ರೀ ಜಿ. ವಿ. ಆಂಜನಪ್ಪ.—ಸರಕಾರಕ್ಕೆ ನಿಜವಾಗಿಯೂ ಬಿಲ್ಲನ್ನು ತರಬೇಕೆಂಬ ಮನಸ್ಸಿಲ್ಲದಿರುವುದರಿಂದ ವಿಳಂಬಕ್ಕೆ ಕಾರಣವಾಗಿಹೆಯಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಹಾಗಲ್ಲ. ಮಾನ್ಯ ಸದಸ್ಯರು ಸಹಕಾರಮಾಡಿದರೆ ತರಲು ಸರಕಾರಕ್ಕೆ ಇಚ್ಛೆಯಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ಒಟ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ ಚುನಾವಣೆ ಯಾವಾಗ ಮುಗಿಯುವುದು ?

ಶ್ರೀ ಪಿ. ಎಂ. ನಾಡಗೌಡ.—ಈಗ ಪಂಚಾಯಿತಿ ಚುನಾವಣೆಯಿದೆ, ತಾಲ್ಲೂಕು ಬೋರ್ಡುಗಳ ಚುನಾವಣೆಯಾಗಬೇಕು, ಕಾಯಿದೆ ತರಬೇಕು, ಪರಿಶೀಲಿಸಿ ಶೀಘ್ರವಾಗಿ ತರುತ್ತೇವೆ.

ಶ್ರೀ ಎಂ. ಲಿಂಗಣ್ಣ.—ಹೊಸ ಕಾಯಿದೆಯ ಪ್ರಕಾರ ಹೊಸ ಚುನಾವಣೆ ನಡೆಸ ಬೇಕೆಂದಿದ್ದೀರೋ ಅಥವಾ ಹಳೆಯ ಕಾಯಿದೆಯ ಪ್ರಕಾರ ಹೊಸ ಚುನಾವಣೆ ನಡೆಸಬೇಕೆಂದಿದ್ದೀರೊ ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ಸರಕಾರ ಪರಿಶೀಲಿಸುತ್ತಿದೆ.

Sri M. LINGANNA.—May I know whether the elections will be done at least under the old Act ?

ಶ್ರೀ ಪಿ. ಎಂ. ನಾಡಗೌಡ.—ಎರಡನ್ನೂ ವಿಚಾರಮಾಡುತ್ತೇವೆ.

SHORT NOTICE QUESTION AND ANSWER

Assistance to the Mysore Hindi Prachar Parishat

2. Sri J. B. MALLARADHYA (Legislative Assembly Constituency).—

Will the Minister for Agriculture and Education be pleased to state :—

(*a*) whether the Mysore Hindi Prachar Parishat, Bangalore receives any financial assistance from Government and if it is subject to the control of the Department of Public Instruction ;

(*b*) the nature and extent of Financial aid granted annually ;

(*c*) whether it has come to the notice of Government that in respect of Examinations, proposed to be held by the Parishat recently, Question papers were reported to have leaked out and if so, whether the Department made any investigation ;

(*d*) whether the Fresh Dates for examinations notified and if so, dates fixed for such examinations;

(*e*) whether complaints of Maladminstration by the Executive Committee of the Parishat have been brought to the notice of Government, if so, with what result ;

(*f*) whether the Examinations conducted by the Parishat are recognised by Government ;

(*g*) whether it has come to the notice of the Government that by the postponement of the Examinations 80,000 students and more than 300 Pracharaks are affected ;

(*h*) whether there is a nominee or nominees of the Department of Public Instruction on the Board of the Parishat ;

(*i*) whether some of the office-bearers of the Parishat including the Secretary for the Board of Examiners, Teachers of the Department permitted to hold several offices ;

(*j*) whether Government would ensure that the Examinations held by the Parishat are conducted on satisfactory lines and that Public confidence is restored in regard to its management ?

A.—Sri K. V. SHANKARA GOWDA (Minister for Agriculture and Education).—

(*a*) Yes.

(*b*) The Parishat is receiving financial aid, both from the Government of India and the State Government as per Rules framed for running Free Hindi Classes and for maintaining Hindi Library. The extent of financial assistance received during the past two years is as follows :—

1. Government of India.		2. State Government.	
1966-67	*1967-68*	*1966-67*	*1967-68*
Rs.	Rs.	Rs.	
5,625	4,200	940	Not yet released

(*c*) Yes. The matter was enquired into promptly and the Parishat has been asked to postpone the said Examinations and hold the same at a later date by setting Fresh Question papers.

(*d*) Fresh dates have not yet been fixed and announced.

(SRI K. V. SHANKARA GOWDA)

(*e*) Complaints of maladministration were received for the first time on 15th February 1968. The Director of Public Instruction will hold an enquiry and take suitable action.

(*f*) Yes, the names of the examinations are PRAVESH, UTTAMA and RATNA.

(*g*) The number of students for various examinations of the Parishat for February 1968 is 11,409, the details of which are as follows :—

(i)	Hindi Prathama	...	4,402
(ii)	Madhyama	...	3,621
(iii)	Hindi Pravesh	...	2,066
(iv)	Hindi Uttama	...	923
(v)	Ratna	...	397

(*h*) No.

(*i*) The matter is under investigation, if it is found that some Government servants are holding office and receiving remuneration without prior permission, suitable action will be taken against all concerned.

(*j*) The responsibility for conducting examinations lies with the Parishat, because there is no direct control over the Examinations. If the Parishat fails to conduct examinations on satisfactory lines, Government will certainly reconsider about the recognition already granted to the Examinations.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಮೈಸೂರು ಹಿಂದಿ ಪ್ರಚಾರ ಪರಿಷತ್ತಿನ ದುರ್ವ್ಯವಹಾರ ಮತ್ತು ದುರಾಡಳಿತದ ವಿಷಯದಲ್ಲಿ ಶೀಘ್ರವಾಗಿ ಒಂದು ಸಮಿತಿಮಾಡಿ ಅದರ ನಿಜಸ್ಥಿತಿಯನ್ನು ತಿಳಿಯಲು ಪ್ರಯತ್ನವನ್ನು ಮಾಡುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಅದಕ್ಕೆ ಉತ್ತರ ಕೊಟ್ಟಿದ್ದೇನೆ. 15-2-1968 ದುರಾಡಳಿತದ ಬಗ್ಗೆ ಕೆಲವು ದೂರುಗಳು ಬಂದವು. ಅದನ್ನು ಡಿ. ಪಿ. ಐ. ಪರಿಶೀಲನೆ ಮಾಡುತ್ತಿದ್ದಾರೆ. ಆವರಿಂದ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಪಿ. ಎಸ್. ಶಾಸ್ತ್ರಿ.—ಮೈಸೂರು ರಾಜ್ಯದಲ್ಲಿ ಹೀಗೆ ಸ್ವತಂತ್ರವಾಗಿ ಹಿಂದಿ ಪರೀಕ್ಷೆಯನ್ನು ನಡೆಸತಕ್ಕ ಖಾಸಗಿ ಸಂಸ್ಥೆಗಳು ಸರ್ಕಾರದ ರಕಗ್ನಿಷನ್ ಪಡೆದಿರುವುವು ಎಷ್ಟು ಇವೆ?

ಶ್ರೀ ಕೆ. ವಿ. ಶಂಕರಗೌಡ.—ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಈ ಸಂಸ್ಥೆಯಲ್ಲಿ ಸರ್ಕಾರಿ ನೌಕರರು ಕೆಲಸ ಮಾಡುತ್ತಾರೆ. ಅವರು ನೂರಾರು, ಸಾವಿರಾರು ರೂಪಾಯಿ ತಟ್ಟಿಭತ್ಯ ಮತ್ತು ಪ್ರಯಾಣ ಭತ್ಯೆ ತಿಂಗಳು ತಿಂಗಳೂ ತೆಗೆದುಕೊಳ್ಳುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಬಂದಿಲ್ಲ, ಅಂತಹವರು ಯಾರು ಸರ್ಕಾರದವರ ಅನುಮತಿ ಇಲ್ಲದೆ ಆ ರೀತಿ ಸಂಭಾವನೆಯನ್ನು ಪಡೆಯುತ್ತಾ ಇದ್ದಾರೆ ಅಂತಹವರ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಅಲ್ಲ ಆ ರೀತಿ ನಡೆಯುತ್ತಾ ಇದೆ ಎಂದು ಹೇಳಿ ಖಚಿತವಾಗಿ ಅವರ ಹೆಸರುಗಳ ಜೊತೆಯಲ್ಲೇ ನನಗೆ ಒಂದು ಪಟ್ಟಿಬಂದಿದೆ, ಪರೀಕ್ಷಾ ಮಂತ್ರಿಗಳು, ಮತ್ತು

ಜನರರ್ ಸೆಕ್ರೆಟರಿ ಆ ಪರಿಪತ್ತಿನಲ್ಲಿರುವವರು ಮೂರು ತಿಂಗಳಿನಲ್ಲಿ ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಆ ಪರಿಪತ್ತಿನ ಕಾರ್ಯಕರಾಪಗಳು ಸಮಂಜಸವಾಗಿ, ಯೋಗ್ಯವಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ನನ್ನ ಮನಸ್ಸಿಗೂ ಬಂದಿದೆ. ನಮಗೆ ಬಂದಿರುವ ವರ್ತಮಾನದ ಮೇಲೆ ಇದನ್ನು ಹೇಳುತ್ತಾ ಇದ್ದೇನೆ. ಅದಕ್ಕೇ ಒಂದು ನಿರ್ದಿಷ್ಟವಾದ ತಾರೀಖನ್ನು ನಿಗದಿ ಮಾಡಿ ಡಿ.ಪಿ.ಐ.ರವರು ಅಷ್ಟರೊಳಗೆ ಒಂದು ವರದಿ ಕಳುಹಿಸಬೇಕೆಂದು ಆಜ್ಞೆ ಮಾಡುತ್ತೀರಾ?

ಶ್ರೀ ಕೆ. ಎ. ಶಂಕರಗೌಡ.—ಮಾನ್ಯ ಸದಸ್ಯರು ಯಾವ ವಿಧವಾದ ಶಂಕೆಯನ್ನೂ ಇಟ್ಟುಕೊಳ್ಳಬೇಕಾಗಿಲ್ಲ, ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ. ಕಾನೂನು ಪ್ರಕಾರ ಕೆಲಸ ಕಾರ್ಯ ನಡೆಯುವಿದ್ದರೆ ಪರಿಶೀಲನೆ ಮಾಡಿ ಏನು ಬಂದೋಬಸ್ತು ಮಾಡಬೇಕೋ ಅದನ್ನು ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—35 ಸಾವಿರ ವಿದ್ಯಾರ್ಥಿಗಳು ಈ ವರ್ಷ ಪರೀಕ್ಷೆಗೆ ಕುಳಿತಿದ್ದಾರೆ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—35 ಸಾವಿರ ವಿದ್ಯಾರ್ಥಿಗಳು ಅಲ್ಲ, ನನಗೆ ಬಂದಿರುವ ಸಮಾಚಾರದ ಪ್ರಕಾರ 11 ಸಾವಿರ ವಿದ್ಯಾರ್ಥಿಗಳು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—15-11-1967ನೇ ತಾರೀಖು ಅರ್ಜಿಗಳನ್ನು ಕೊಡಲಿಕ್ಕೆ ಕೊನೆಯ ತಾರೀಖು ಅಂತ ನಿಗದಿಯಾಗಿತ್ತು. 8-1-1968ರವರೆಗೂ ವಿಧಾಯಕವಾಗಿಲ್ಲದಿದ್ದರೂ ಅರ್ಜಿಗಳನ್ನು ತೆಗೆದುಕೊಂಡಿದ್ದಾರೆ. ಅದೂ ಅಲ್ಲದೆ ತಮಗೆ ಬೇಕಾದವರ ಅರ್ಜಿಗಳನ್ನು ಸ್ವೀಕರಿಸಿ, ಬೇಡವಾದವರ ಅರ್ಜಿಗಳನ್ನು ನಿರಾಕರಿಸಿದ್ದಾರೆ. ಹೀಗಾಗಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕವರ ಸಂಖ್ಯೆ 35 ಸಾವಿರ ವಿದ್ಯಾರ್ಥಿಗಳು ಅಂತ ಖಚಿತವಾಗಿ ತಿಳಿದುಬಂದಿದೆ.

ಶ್ರೀ ಕೆ. ಎ. ಶಂಕರಗೌಡ.—ಅದು ನನ್ನ ಗಮನಕ್ಕೆ ಬಂದಿಲ್ಲ. ನನಗೆ ಬಂದಿರುವ ಸಮಾಚಾರದ ಪ್ರಕಾರ ಹಿಂದಿ ಪ್ರಥಮಕ್ಕೆ 4,402, ಮಾಧ್ಯಮಿಕಕ್ಕೆ 3,621, ಹಿಂದಿ ಪ್ರವೇಶ ಪರೀಕ್ಷೆಗೆ 3,062, ರತ್ನ ಪರೀಕ್ಷೆಗೆ 397 ಅಂತ ಗೊತ್ತಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ — ಹಿಂದಿ ಮೇಲೆ ಅಭಿಮಾನ ಇರತಕ್ಕ ಜನ ಈ ಸಂಸ್ಥೆಗೆ ಸದಸ್ಯರಾಗಬೇಕೆಂದು ಅರ್ಜಿ ಕಳುಹಿಸಿದರೆ ಸಕಾರಣ ಯಾವುದೂ ನಮೂದು ಮಾಡದೆ ಕೆಲವು ಅರ್ಜಿಗಳನ್ನು ನಿರಾಕರಿಸಿರತಕ್ಕ ಸಂದರ್ಭ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಅದು ನನ್ನ ಗಮನಕ್ಕೆ ಬಂದಿಲ್ಲ. ಅದೆಲ್ಲವನ್ನೂ ಪರಿಶೀಲನೆ ಮಾಡುತ್ತೇವೆ. ಅಲ್ಲಿರತಕ್ಕ ನ್ಯೂನ್ಯತೆಗಳನ್ನು ಪರಿಶೀಲನೆ ಮಾಡಿ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಎಸ್. ಮುಕುಂದರಾವ್.—ಸರ್ಕಾರವೇ ಹಿಂದಿ ಪರೀಕ್ಷೆ ನಡೆಸುತ್ತಾ ಇದೆ. ಇನ್ನು ಮುಂದೆ ಖಾಸಗಿ ಸಂಸ್ಥೆಗಳು ನಡೆಸತಕ್ಕ ಪರೀಕ್ಷೆಗೆ ಮಾನ್ಯತೆ ಕೊಡುವುದಿಲ್ಲ ಎಂದು ಗೆಜೆಟ್‌ನಲ್ಲಿ ಒಂದು ಸಲ ಹೇಳಿ ಪುನಃ ಈ ವರ್ಷ ಅದಕ್ಕೆ ಮಾನ್ಯತೆ ಕೊಟ್ಟು ಏಕೆ ಮುಂದುವರಿಸುತ್ತಾ ಇದ್ದೀರಿ ?

ಶ್ರೀ ಕೆ. ಎ. ಶಂಕರಗೌಡ.—ಅನೇಕ ಖಾಸಗಿ ಸಂಸ್ಥೆಗಳಿಗೆ ಮಾನ್ಯತೆ ಕೊಡಲಾಗಿದೆ, ಒಂದೇ ಸಾರಿ ಏಕ್‌ದಂ ಅದನ್ನು ನಿಲ್ಲಿಸುವುದು ಕಷ್ಟ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮೈಸೂರು ಸಂಸ್ಥಾನದಲ್ಲಿ ಇನ್ನು ಮುಂದೆ ತ್ರಿಭಾಷಾ ಸೂತ್ರ ಜಾರಿಗೆ ಬರುವುದರಿಂದ ಈ ಹಿಂದೀ ಪರೀಕ್ಷೆಗೆ ಒಂದು ಘನತೆ, ಗೌರವ, ಮಾನ್ಯತೆ ಬರುವ ದೃಷ್ಟಿಯಿಂದ ಸರ್ಕಾರದವರು ಈ ಎಲ್ಲಾ ಪರೀಕ್ಷೆಗಳನ್ನೂ ಕೇಂದ್ರೀಕರಿಸಿ ಹಿಂದೀ ಎಗ್ಸಾಮಿನೇಷನ್ ಬೋರ್ಡ್ ಅಂತ ಮಾಡಿ, ಈ ಪರೀಕ್ಷೆಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೇ ! ಏಕೆ ಹಾಗೆ ಮಾಡಬಾರದು ?

ಶ್ರೀ ಕೆ. ಎ. ಶಂಕರಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಶಿಕ್ಷಣವನ್ನು ಸರ್ಕಾರದವರು ಮತ್ತು ಖಾಸಗಿಯವರು ಇಬ್ಬರೂ ಸೇರಿಕೊಂಡು ನಿರ್ವಹಿಸುತ್ತಾ ಇದ್ದಾರೆ. ಬರೀ ಸರ್ಕಾರದವರೇ ನಿರ್ವಹಿಸಬೇಕೆಂದರೆ ಕಷ್ಟವಾಗಬಹುದು. ಖಾಸಗಿ ಸಂಸ್ಥೆಯವರು ಕೆಲವರು ಬಹಳ ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಒಂದೆರಡು ಸಂಸ್ಥೆಗಳಲ್ಲಿ ನ್ಯೂನ್ಯತೆ ಇರಬಹುದು ಅಂದ ಮಾತ್ರಕ್ಕೆ ಎಲ್ಲ ಸಂಸ್ಥೆಗಳೂ ಕೆಟ್ಟುಹೋಗಿವೆ ಅಂತ ಹೇಳಿ ಸರ್ಕಾರದವರೇ ಎಲ್ಲವನ್ನೂ ನಡೆಸಬೇಕೆಂದು ಹೇಳತಕ್ಕ ವಾದ ಸರಿಹೋಗುವುದಿಲ್ಲ ಎಂದು ಅನಿಸುತ್ತದೆ.

ಶ್ರೀ ಎಸ್. ಮುಕುಂದರಾವ್.—ಖಾಸಗಿ ಸಂಸ್ಥೆಗಳವರು ಪರೀಕ್ಷೆಗಳನ್ನು ನಡೆಸುತ್ತಾ ಇರುವುದರಿಂದ ಸರ್ಕಾರದವರಿಗೂ ನಷ್ಟವಾಗುತ್ತಾ ಇದೆ. ಅವರು ಸಾಮಿರಾರು ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳನ್ನು ಕೊಡುತ್ತಾ ಇದ್ದಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಪರೀಕ್ಷೆ ಮಾಡದೇ ಸರ್ಟಿಫಿಕೇಟ್ ಕೊಡುತ್ತಾರೆ ಅನ್ನುವ ಮಾತು ನಂಬುವುದಕ್ಕಾಗುವುದಿಲ್ಲ.

ಶ್ರೀ ಜೆ. ಬಿ ಮರ್ಲಾರಾಧ್ಯ.—ತಾಂತ್ರಿಕ ಮತ್ತು ವೈಜ್ಞಾನಿಕ ಪರೀಕ್ಷೆಗಳು ಇನ್ನಾವುದಕ್ಕೂ ಕೊಡದೇ ಇರತಕ್ಕ ವಾನ್ಯತೆಯನ್ನು ಈ ಹಿಂದೀ ಪರೀಕ್ಷೆಗೆ ಕೊಡುವುದರ ಉದ್ದೇಶವೇನು ? ಸರ್ಕಾರದವರೇ ಮಾಡಲು ಇರತಕ್ಕ ತೊಂದರೆಯೇನು ?

ಶ್ರೀ ಕೆ. ವಿ. ಶಂಕರಗೌಡ.—ಖಾಸಗಿ ಸಂಸ್ಥೆಗಳವರು ನಡೆಸತಕ್ಕ ಪರೀಕ್ಷೆಯನ್ನೂ ಸರ್ಕಾರದವರೇ ಮಾಡಬೇಕೆಂದರೆ ದುಡ್ಡಿನ ವಿಷಯವನ್ನೂ ಕೂಡ ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಸರ್ಕಾರದವರಿಗೆ ಗೊತ್ತಿರಬಹುದು, ಈ ಪರಿಷತ್ತಿನವರು ಲಾಭ ಇಲ್ಲದೆ ಈ ಪರೀಕ್ಷೆಗಳನ್ನು ನಡೆಸುತ್ತಾ ಇಲ್ಲ. ಪರೀಕ್ಷಾ ಶುಲ್ಕವನ್ನು ಅವರು ವಸೂಲು ಮಾಡುತ್ತಾರೆ. ವಸೂಲು ಮಾಡಿ ಲಾಭ ಸಂಪಾದನೆ ಮಾಡುತ್ತಾ ಇದ್ದಾರೆ. ಸರ್ಕಾರದಿಂದ ಪರೀಕ್ಷೆ ನಡೆಸಿದರೆ ನಷ್ಟವಾಗುತ್ತದೆ, ಆರ್ಥಿಕ ದೃಷ್ಟಿಯಿಂದ ಸಮಂಜಸವಾದ ವಿಷಯವಿಲ್ಲ ಎಂದು ಹೇಳುವುದಾದರೆ ಅದನ್ನು ದಯವಿಟ್ಟು ಪರಿಶೀಲನೆ ಮಾಡಿ, ನಷ್ಟವಾಗುವುದಾದರೆ ಬಿಡಬಹುದು.

ಶ್ರೀ ಕೆ. ವಿ. ಶಂಕರಗೌಡ.—ಖಾಗಿಯವರು ನಡೆಸುವಾಗ ಶುಲ್ಕ ಕೊಡಬಹುದು, ಸರ್ಕಾರಕ್ಕೆ ಬಂದ ಮೇಲೆ ಶುಲ್ಕ ಹಾಕಬೇಡಿ ಎಂದು ಪ್ರಾರಂಭ ಮಾಡುತ್ತಾರೆ.

ಶ್ರೀ ವೈ. ಎಸ್. ಪಾಟೀಲ್.—ನಮ್ಮ ರಾಜ್ಯದಲ್ಲಿ ಈ ಪ್ರಕಾರ ಖಾಸಗಿಯಾಗಿ ಹಿಂದೀ ಪರೀಕ್ಷೆಗಳನ್ನು ನಡೆಸತಕ್ಕ ಖಾಸಗಿ ಸಂಸ್ಥೆಗಳ ಸಂಖ್ಯೆ ಎಷ್ಟು ?

ಶ್ರೀ ಕೆ. ವಿ. ಶಂಕರಗೌಡ.—ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಬೇರೆ ಬೇರೆ ಸಂಸ್ಥೆಗಳವರು ನಡೆಸತಕ್ಕ ಪರೀಕ್ಷೆಗಳ ಮಟ್ಟವನ್ನು ಮತ್ತು ಯಾವುದು ಸರಿ ಎಂದು ಹೇಳತಕ್ಕ ಕ್ಯಾಲಿಫೇಟೀವ್ ಕಮಿಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ನಲ್ಲಿ ಯಾವುದಾದರೂ ಇದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಇದೆ.

Sri K. R. ACHAR.—May I know whether the accounts of this Parishat have been audited and whether the Government has any control over it ?

Sri K. V. SHANKARA GOWDA.—Government has no control over it but I presume they are audited.

Sri K. R. ACHAR.—Will the Government send for the audit reports of this Parishat for the last two years and see what they are ?

Sri K. V. SHANKARA GOWDA.—I am afraid we may not have the right to call for them.

Sri M. P. L. SASTRY.—Will the Government take all the necessary steps to maintain the usefulness and sanctity of the examination no matter who conducts it ?

Sri K. V. SHANKARA GOWDA.—Yes.

ಶ್ರೀ ಎಸ್. ಪಿ. ರಾಜಣ್ಣ.—ಈ ರೀತಿ ಖಾಸಗಿ ಸಂಸ್ಥೆಗಳವರು ಪರೀಕ್ಷೆಗಳನ್ನು ಮಾಡುತ್ತ ಇರುವಾಗ ಹಿಂದಿ ಬೋರ್ಡ್ ಅಂತ ಮಾಡಿ ಪರೀಕ್ಷೆಗಳನ್ನು ಏಕೆ ನಡೆಸುವಾರದು ? ಸರ್ಕಾರದವರೂ ಕೂಡ ಪರೀಕ್ಷೆಗಳನ್ನು ನಡೆಸುತ್ತಾ ಇದ್ದೀರಿ, ಇದಕ್ಕೆ ಕಾರಣವೇನು ?

ಶ್ರೀ ಕೆ. ವಿ. ಶಂಕರಗೌಡ.—ಖಾಸಗಿಯವರ ಜೊತೆಯಲ್ಲಿ ಸರ್ಕಾರದವರೂ ನಡೆಸುತ್ತಾ ಇದ್ದಾರೆ, ನಡೆಸಬಾರದು ಎಂದು ಯಾರ ಅಡ್ಡಿಯೂ ಇಲ್ಲ, ನಡೆಸುತ್ತಾ ಇದ್ದಾರೆ.

ಶ್ರೀ ಎಸ್. ಪಿ. ರಾಜಣ್ಣ.—ಖಾಸಗಿ ಸಂಸ್ಥೆಗಳವರು ಪರೀಕ್ಷೆಗಳನ್ನು ಸರಿಯಾಗಿ ನಡೆಸುತ್ತಿಲ್ಲ ಎಂಬ ಭಾವನೆಯಿಂದ ಈ ರೀತಿ ಹಿಂದಿ ಬೋರ್ಡ್ ಮಾಡಿ ಪರೀಕ್ಷೆಗಳನ್ನು ನಡೆಸಬೇಕೆಂದು ಹೇಳುತ್ತಾ ಇದ್ದಾರೆ, ಇದನ್ನು ಯೋಚನೆ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಸರಿಯಾಗಿ ಮಾಡುತ್ತಿಲ್ಲ ಅಂತ ಅಲ್ಲ, ಹಿಂದಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ, ಎಲ್ಲವನ್ನೂ ಸರ್ಕಾರದವರೇ ನಡೆಸುವುದು ಕಷ್ಟ.

ಶ್ರೀ ಎಸ್. ಪಿ. ರಾಜಣ್ಣ.—ಹಿಂದಿ ಒಂದನ್ನು ಬಿಟ್ಟು ಸರ್ಕಾರದವರು ಎಲ್ಲ ಪರೀಕ್ಷೆಗಳನ್ನೂ ನಡೆಸುತ್ತಾ ಇವ್ವಾರೆ. ಅದೇ ರೀತಿ ಹಿಂದಿ ಪರೀಕ್ಷೆಯನ್ನೂ ಕೂಡ ಸರ್ಕಾರದವರೇ ಏಕೆ ಮಾಡಬಾರದು ?

Sri K. V. SHANKARA GOWDA.—That is a suggestion for future examination and that will be examined.

Sri K. R. ACHAR.—In view of the fact that Government is giving aid to the Parishat, will Government make it a condition precedent that they should submit their audited accounts ?

Sri K. V. SHANKARA GOWDA.—If we give financial assistance, certainly the officers concerned will ask for the audited statement of accounts of the concerned society; they are bound to send it to the concerned officer.

Sri J. B. MALLARADHYA.—Both the Government of India and the Government of Mysore are giving some financial assistance, though it is not much. In view of this, is not the Government getting regularly their Annual Reports of work done and statement of income and expenditure ?

Sri K. V. SHANKARA GOWDA.—Before the grants are utilised it is necessary to send these reports, and we will necessarily look into it.

ಶ್ರೀ ಮೈ. ಎಸ್. ಪಾಟೀರ್.—ನಮ್ಮ ಮೈಸೂರು ಹಿಂದೀ ಪ್ರಚಾರ ಸಭೆಯನ್ನು ಬಿಟ್ಟು ಬೇರೆ ಯಾವ ಸಂಸ್ಥೆಗಾದರೂ ಗ್ರಾಂಟನ್ನು ಕೊಡುತ್ತಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅನೇಕ ಸಂಸ್ಥೆಗಳಿಗೆ ಗ್ರಾಂಟನ್ನು ಕೊಡಲಾಗುತ್ತಿದೆ.

ಶ್ರೀ ಮೈ. ಎಸ್. ಪಾಟೀರ್.—ಅಂಥ ಸಂಸ್ಥೆಗಳ್ಯಾವುವು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ಬಗ್ಗೆ ಒಂದು ಪಟ್ಟಿಯೇ ಇದೆ. ಅದು ಈಗ ನನ್ನಲ್ಲಿಲ್ಲ.

Mr. CHAIRMAN.—Question Hour is over.

LEAVE OF ABSENCE TO Sri K. DHOOMAPPA—GRANT OF

Mr. CHAIRMAN.—I have received a letter from Sri K. Dhoomappa, Member, Legislative Council, requesting for leave of absence from 21st February 1968 to 2nd March 1968 from attending the Session, due to the death of his youngest brother.

Is it the pleasure of the House that permission be granted ?

HON. MEMBERS.—Yes.

Mr. CHAIRMAN.—Permission to remain absent is granted.